सत्यमेव जयते
ರಾಜೀವ್ ಚಂದ್ರಶೇಖರ್
ಸಂಸತ್ ಸದಸ್ಯರು

ಜೂನ್ 16, 2015

**ಸನ್ಮಾನ್ಯ ಸಿದ್ದರಾಮಯ್ಯನವರೇ,**

ಕರ್ನಾಟಕ ಸರ್ಕಾರದ ಮುಖ್ಯಮಂತ್ರಿಗಳಾಗಿ ಮತ್ತು ಅಬಕಾರಿ ಖಾತೆಯ ಹೊಣೆಯನ್ನು ತಾವೆ ನಿರ್ವಹಿಸುತ್ತಿರುವುದರಿಂದ ತಮಗೆ ಈ ಪತ್ರವನ್ನು ಬರೆಯುತ್ತಿದ್ದೇನೆ. ಇತ್ತೀಚಿನ ದಿನಗಳಲ್ಲಿ ನನ್ನ ಬಳಿ ಹದಿಹರೆಯದ ಮಕ್ಕಳ ಅನೇಕ ಪೋಷಕರು ಮತ್ತು ಶಾಲಾ ಶಿಕ್ಷಕರು ಹೆಚ್ಚಿನ ಸಂಖ್ಯೆಯಲ್ಲಿ ಮನವಿಗಳನ್ನು ಸಲ್ಲಿಸುತ್ತಿದ್ದಾರೆ. ಅವರ ಕಾಳಜಿಯೆಂದರೆ, ಬೆಂಗಳೂರು ಬ್ರ್ಯು ವರ್ಕ್ಸ್, ದಿ ಗ್ಲಾಸ್ ಹೌಸ್, ಸ್ಕೈ, ದಿ ಸೋಶಿಯಲ್ ಮುಂತಾದ ಬೆಂಗಳೂರಿನ ಅನೇಕ ರೆಸ್ಟೋರೆಂಟ್, ಬಾರ್ ಮತ್ತು ಲಾಂಜ್ ಗಳಲ್ಲಿ, ಎಲ್ಲ ನಿಯಮ-ನಿಬಂಧನೆಗಳನ್ನು ಉಲ್ಲಂಘಿಸಿ, 21 ವರ್ಷದ ಒಳಗಿನ ಮಕ್ಕಳಿಗೂ ಮದ್ಯವನ್ನು ಪೂರೈಸಲಾಗುತ್ತಿರುವ ಕುರಿತು ಆತಂಕಗೊಂಡಿದ್ದಾರೆ.

ನಾನು ಈ ಹಿಂದೆಯೂ ಕೂಡ ಅಬಕಾರಿ ಆಯುಕ್ತರಿಗೆ ಈ ಕುರಿತು ಪತ್ರವನ್ನು ಬರೆದಿದ್ದೆ (ಪ್ರತಿ ಲಗತ್ತಿಸಲಾಗಿದೆ) ಮತ್ತು ಇಂತಹ ಉಲ್ಲಂಘನೆಗಳ ಹಲವಾರು ನಿದರ್ಶನಗಳ ಕಡೆಗೆ ಅವರ ಗಮನವನ್ನು ಸೆಳೆದು, ಸರ್ಕಾರ ಕೂಡಲೇ ಈ ನಿಟ್ಟಿನಲ್ಲಿ ಕಟ್ಟುನಿಟ್ಟಿನ ಕಾನೂನು ಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ಒತ್ತಾಯಿಸಿದ್ದೆ. ಹಾಗಿದ್ದರೂ, ನಗರದ ಅನೇಕ ಪ್ರತಿಷ್ಠಿತ ಲಾಂಜ್, ರೆಸ್ಟೋರೆಂಟ್ ಮತ್ತು ಬಾರ್ ಗಳಲ್ಲಿ, ಯಾವುದೇ ಭಯವಿಲ್ಲದೆ ನಿಯಮಗಳನ್ನು ಗಾಳಿಗೆ ತೂರಿ, ಶಾಲಾ ಮಕ್ಕಳೂ ಸೇರಿದಂತೆ ಅಪ್ರಾಪ್ತ ವಯಸ್ಸಿನ ಮಕ್ಕಳಿಗೆ ಮದ್ಯವನ್ನು ನೀಡಲಾಗುತ್ತಿರುವ ಅನೇಕ ದೂರುಗಳು ಬರುತ್ತಿವೆ.

ಕಾನೂನುಗಳನ್ನು ಕಟ್ಟುನಿಟ್ಟಾಗಿ ಅನುಷ್ಠಾನಗೊಳಿಸುವುದು ಅಬಕಾರಿ ಇಲಾಖೆಯ ಕರ್ತವ್ಯವಾಗಿದ್ದು, ಎಲ್ಲಿಯೂ ಕೂಡ ನಿಯಮಗಳನ್ನು ಮೀರಿ ಮದ್ಯ ಸರಬರಾಜಿನ ಇಂತಹ ಘಟನೆಗಳು ನಡೆಯದಂತೆ ಖಚಿಪಡಿಸಿಕೊಳ್ಳಬೇಕು. ಮದ್ಯ ಲಭ್ಯವಿರುವ ನಗರದ ಎಲ್ಲ ಸ್ಥಳಗಳಲ್ಲಿಯೂ ಕಾನೂನನ್ನು ಕಟ್ಟುನಿಟ್ಟಾಗಿ ಪಾಲಿಸುವಂತೆ ಮತ್ತು ಅಪ್ರಾಪ್ತರಂತೆ ಕಂಡಲ್ಲಿ, ಸೂಕ್ತ ಗುರುತಿನ ಪ್ರಮಾಣ ಪತ್ರಗಳನ್ನು ಪರಿಶೀಲಿಸಿ ಖಚಿತಪಡಿಸಿಕೊಂಡ ನಂತರವೇ ಮದ್ಯ ನೀಡುವಂತೆ ನಿರ್ದೇಶಿಸಬೇಕು.

ಅಪ್ರಾಪ್ತ ವಯಸ್ಸಿನ ಮಕ್ಕಳಿಗೆ ಮದ್ಯಸೇವನೆಗೆ ಅವಕಾಶ ನೀಡುವುದು ಕಾನೂನಿನ ನಿರ್ಲಜ್ಜ ಉಲ್ಲಂಘನೆ ಮಾತ್ರವಲ್ಲ ಮಕ್ಕಳ ಮೇಲೆ ನಡೆಸುವ ಅಪರಾಧವಾಗಿದೆ. ಯಾವ ರೆಸ್ಟೋರೆಂಟ್, ಬಾರ್ ಅಥವಾ ಲಾಂಜ್ ಗಳಲ್ಲಿ ಇಂತಹ ಅಕ್ರಮಗಳು ನಡೆಯುತ್ತಿವೆಯೋ ಅವುಗಳ ಮೇಲೆ ಕಾನೂನು ರೀತ್ಯ ಕ್ರಮಕೈಗೊಂಡು ದಂಡ ವಿಧಿಸಬೇಕು. ಆ ಮೂಲಕ ಅಪ್ರಾಪ್ತ ಮಕ್ಕಳಿಗೆ ಮದ್ಯಪಾನಕ್ಕೆ ಅವಕಾಶ ನೀಡುವವರ ಮತ್ತು ಈ ಅಕ್ರಮ ಕೃತ್ಯಗಳಲ್ಲಿ ಮಕ್ಕಳನ್ನು ತೊಡಗಿಸುವವರನ್ನು ಸರ್ಕಾರ ಎಂದಿಗೂ ಸಹಿಸುವುದಿಲ್ಲ ಎಂಬ ಕಠಿಣ ಸಂದೇಶವನ್ನು ನೀಡಬೇಕು.



11ನೇ ಮಹಡಿ, ದೊಡ್ಡ ಗೋಪುರ, ಸರ್.ಎಂ.ವಿಶ್ವೇಶ್ವರಯ್ಯ ಕೇಂದ್ರ, ಡಾ.ಅಂಬೇಡ್ಕರ್ ವೀಧಿ, ಬೆಂಗಳೂರು - 560 001.
ದೂರವಾಣಿ : 91-80-22863600, ದೂರವಾಣಿ / ಫ್ಯಾಕ್ಸ್ : 91-80-22863680

ಕಾನೂನಿನ ಸಂಪೂರ್ಣ ಅನುಷ್ಠಾನವನ್ನು ಖಚಿತಪಡಿಸಿಕೊಳ್ಳಲು ಸರ್ಕಾರ ಇಂತಹ ಎಲ್ಲ ಸ್ಥಳಗಳ ಆಡಿಟ್ ನಡೆಸುವುದರ ಜೊತೆಗೆ ದಿಢೀರ್ ತಪಾಸಣೆಗಳನ್ನು ನಡೆಸಬೇಕೆಂದು ಈ ಮೂಲಕ ತಮ್ಮ ಸರ್ಕಾರವನ್ನು ಒತ್ತಾಯಿಸುತ್ತಿದ್ದೇನೆ. ಮತ್ತೆ ಇಂತಹ ಪ್ರಕರಣಗಳು ನಡೆದಲ್ಲಿ ಅಧಿಕಾರಿಗಳನ್ನೆ ಉತ್ತರದಾಯಿಯಾಗಿಸಬೇಕು ಮತ್ತು ಕಾನೂನಿನ ಕಟ್ಟುನಿಟ್ಟಿನ ಜಾರಿಗೆ ಕ್ರಮಕೈಗೊಳ್ಳುವಲ್ಲಿ ವಿಫಲರಾದ ಅಧಿಕಾರಿಗಳ ವಿರುದ್ಧ ಶಿಸ್ತುಕ್ರಮ ತೆಗೆದುಕೊಳ್ಳಬೇಕು. ಇಲ್ಲದಿದ್ದಲ್ಲಿ ಸರ್ಕಾರ/ಅಬಕಾರಿ ಇಲಾಖೆಯಲ್ಲಿ ಕಟ್ಟುನಿಟ್ಟಿನ ಕಾನೂನು ಪಾಲನೆ ಮತ್ತು ಕಾನೂನು ಜಾರಿಗೊಳಿಸುವಲ್ಲಿ ವಿಫಲರಾಗುವುದರ ವಿರುದ್ಧ ಅನ್ಯ ಕ್ರಮಗಳ ಮೊರೆ ಹೋಗುವ ಅನಿವಾ ರ್ಯತೆ ಸೃಷ್ಟಿಸಿದ ತಾಗುತ್ತದೆ.

ಈ ಪ್ರಮುಖ ವಿಚಾರದ ಕುರಿತು ತಮ್ಮ ಪ್ರತಿಕ್ರಿಯೆ ಮತ್ತು ಸೂಕ್ತ ಕ್ರಮಗಳನ್ನು ಎದುರುನೋಡುತ್ತಿದ್ದೇನೆ.

ತಮ್ಮ ವಿಶ್ವಾಸಿ,

**ರಾಜೀವ್ ಚಂದ್ರಶೇಖರ್**

**ಶ್ರೀ ಸಿದ್ದರಾಮಯ್ಯನವರು,**
ಸನ್ಮಾನ್ಯ ಮುಖ್ಯಮಂತ್ರಿಗಳು,
ಕರ್ನಾಟಕ ಸರ್ಕಾರ,
ವಿಧಾನಸೌಧ, ಬೆಂಗಳೂರು

**ಪ್ರತಿಯನ್ನು:-** ಶ್ರೀ ಎಸ್.ಆರ್. ಉಮಾಶಂಕರ್, ಭಾ.ಆ.ಸೇ, ಅಬಕಾರಿ ಆಯುಕ್ತರು, ಬೆಂಗಳೂರು